ಈ) 3 ತಾಂಡಾಗಳಿವೆ.

ಅರ್ಹವಿರುವ ತಾಂಡಾಗಳನ್ನು ಗ್ರಾಮಗಳನ್ನಾಗಿ 6(ಆರು) ತಿಂಗಳೊಳಗೆ ಪರಿವರ್ತಿಸಲಾಗುವುದು.

ಬೈಲಹೊಂಗಲ ತಾಲ್ಲೂಕುಗಳ ಹೈಕ ದೇವಲಾಪುರ ಗ್ರಾಮದಲ್ಲಿ ಪರಿಶಿಷ್ಟರಿಗೆ ಸ್ಮಶಾನ

357 (858): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ದೇವಲಾಪುರ ಗ್ರಾಮದಲ್ಲಿ ಪರಿಶಿಷ್ಟ ಜನಾಂಗದವರು ಹೂಗಿಯುತ್ತಿದ್ದ ರುದ್ರ ಭೂಮಿಯ ಬಗ್ಗೆ ಕೋರ್ಟಿನಲ್ಲಿ ವ್ಯಾಜ್ಯ ನಡೆದದ್ದರಿಂದ ಆ ಜನರಿಗೆ ಶವ ಸಂಸ್ಕಾರಕ್ಕೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಆ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರಿಗೆ ಶವ ಸಂಸ್ಕಾರಕ್ಕೆ 2 ಎಕರೆ ಭೂಮಿಯನ್ನು ಸ್ಮಶಾನಕ್ಕಾಗಿ ಸರ್ಕಾರವು ಮಂಜೂರು ಮಾಡುವುದೇ ?

ಇ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಸೈಕ ಬೈಲವಾಡ ಮತ್ತು ಸವದತ್ತಿ ತಾಲ್ಲೂಕು ಪೈಕಿ ಹಾರುಗೊಪ್ಪದ ಗ್ರಾಮದ ಜನರಿಗೆ ಸ್ಮಶಾನ ಇಲ್ಲದ್ದರಿಂದ ಶವ ಸಂಸ್ಕಾರಕ್ಕೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಈ ಗ್ರಾಮಗಳ ಜನರಿಗೆ ರುದ್ರ ಭೂಮಿಗಾಗಿ ಜಮೀನು ಮಂಜೂರು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಈ) ಬೆಳಗಾವಿ ಜಿಲ್ಲೆಯಲ್ಲಿ ಶವ ಸಂಸ್ಕಾರಕ್ಕಾಗಿ ರುದ್ರ ಭೂಮಿ ಇಲ್ಲದಿರುವ ಗ್ರಾಮಗಳು ಹಾಗೂ ಸದರಿ ಭೂಮಿಗೆ ರಸ್ತೆ ಸೌಲಭ್ಯವಿಲ್ಲದ ಗ್ರಾಮಗಳಾವುವು (ತಾಲ್ಲೂಕುವಾರು, ಗ್ರಾಮವಾರು ಪ್ರತ್ಯೇಕ ವಿವರ ನೀಡುವುದು)

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ) ಹೌದು

ಆ) ಹೌದು ರುದ್ರ ಭೂಮಿಗಾಗಿ ಭೂ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಇ) ಹೌದು ರುದ್ರಭೂಮಿಗಳಿಗಾಗಿ ಭೂ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಈ) ತಾಲ್ಲೂಕುವಾರು, ರುದ್ರ ಭೂಮಿಗಳು ಇಲ್ಲದ ಗ್ರಾಮಗಳ ಸಂಖ್ಯೆ:

ತಾಲ್ಲೂಕುವಾರು	ಗ್ರಾಮಗಳ ಸಂಖ್ಯೆ
ಹುಕ್ಕೇರಿ	78
ಬೈಲಹೊಂಗಲ	86
ಗೋಕಾಕ್	50
ಸೌಂದತ್ತಿ	57
ಚಿಕ್ಕೋಡಿ	29
ರಾಯ್‌ಬಾಗ್	30

ಬೈಲಹೊಂಗಲ ತಾಲ್ಲೂಕು ಉದುಕೇರಿ ಗ್ರಾಮದ ರುದ್ರಭೂಮಿಗೆ ಮಾತ್ರ ರಸ್ತೆ ಸೌಲಭ್ಯವಿಯವುದಿಲ್ಲ.

1989 ಮತ್ತು 90–91ರ ಸಾಲಿನಲ್ಲಿ ಟಿ.ಎ.ಪಿ.ಸಿ.ಎಂ.ಎಸ್.ಗಳಿಗೆ ಸರ್ಕಾರದಿಂದ ಸಕ್ಕರೆ ವ್ಯತ್ಯಾಸ ದರ ಪಾವತಿ ಬಾಕಿ

355 (1041): ಶ್ರೀ ರುಕ್ಕಯ್ಯಾ ಪೂಜಾರಿ (ನಿಟ್ಟ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1989–90ನೆಸ್ಸು 1990–91ರ ಸಾಲುಗಳಲ್ಲಿ, ತಾಲ್ಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳಿಗೆ ಸರ್ಕಾರದಿಂದ ಸಕ್ಕರೆ ವ್ಯತ್ಯಾಸ ದರ ಪಾವತಿಸಲು ಎಷ್ಟು ಬಾಕಿ ಇದೆ ?

ಆ) ಬಾಕಿಯಾಗಲು ಕಾರಣಗಳೇನು ? ಇದರಿಂದ ಟಿ.ಎ.ಪಿ.ಸಿ.ಎಂ.ಎಸ್‌ಗಳು ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಇದನ್ನು ರಕ್ಷಣಾ ಪಾವತಿಸಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ: (ಸಹಕಾರ ಸಚಿವರು):–

ಅ) 413.16 ಲಕ್ಷ ರೂಪಾಯಿಗಳು

ಆ) ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯಿಂದ ಈ ಹಣ ಬರಬೇಕಾಗಿದ್ದು ಬಾಕಿ ಇರುತ್ತದೆ. ಹಣ ಸಕಾಲಕ್ಕೆ ಬರದೇ ಇರುವುದರಿಂದ ಸಂಘಗಳು ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಹೌದು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಮೊದಲು ಮಂತ್ರಿಗಳ ಗೈರು ಹಾಜರಿ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ:– ಅವರು ಅವರ ಬ್ರದರ್ ಡಾಟರ್ ಮದುವೆಗೆ ಹೋಗಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ:– ಅವರು ಮದುವೆಗೆ ಹೋಗಿದ್ದರೆ ಬಹಳ ಸಂತೋಷ. ಆದರೆ ಅದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಈ ಸದನಕ್ಕೆ ಬರುವುದಿಲ್ಲ ಎಂದು ಮೊದಲು ನಿಮಗೆ ತಿಳಿಸಬೇಕು. ಅವರು ನಿಮಗೆ ತಿಳಿಸಿದ್ದಾರೆಯೇ ಅಥವಾ ಪತ್ರ ಬರೆದಿದ್ದಾರೆಯೇ ಎನ್ನುವುದನ್ನು ಮೊದಲು ಹೇಳಿ.

ಅಧ್ಯಕ್ಷರು:– ಪತ್ರ ಬರೆದಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ತಮಗೆ ಗೊತ್ತಿರುವ ಹಾಗೆ, ರಾಜ್ಯದಲ್ಲಿ ಕಳೆದ 3–4 ದಿವಸಗಳಿಂದ ಮನೆಯಲ್ಲಿದ್ದಂತಹ ನೂರಾರು ಬಿಜೆಪಿ ಕಾರ್ಯಕರ್ತರನ್ನು ಕರೆದುಕೊಂಡು ಬಂದು ಜೈಲಿಗೆ ಹಾಕಿದ್ದಾರೆ.